೩. ಪ್ರಮುಖ ವಚನಕಾರರು :

೧. ದೇವರರ ದಾಸಿಮಯ್ಯ :

೧೧ನೇ ಶತಮಾನದ ಉತ್ತರಾರ್ಧ ಹಾಗೂ ೧೨ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಆದ್ಯ ವಚನಕಾರ. ಸುರುಪುರ ತಾಲೂಕಿನ ಮುದನೂರು ಈತನ ಜನ್ಮಸ್ಥಳ ; ರಾಮನಾಥ ಈತನ ಆರಾಧ್ಯದೈವ ಈತನು ಬಟ್ಟೆ ನೇಯುವ ಕಾಯಕವನ್ನು ಮಾಡಿಕೊಂಡಿದ್ದನು. ಈತನು ಸುಮಾರು ೧೫೦ ವಚನಗಳು ಲಭ್ಯವಾಗಿವೆ. ಅವುಗಳಲ್ಲಿ ತೀವ್ರವಾದ ವೀರಶೈವ ನಿಷ್ಠೆ ನಿಷ್ಠುರವಾದ ಸ್ಪಷ್ಟವಾಕ್ಯತೆ ಮಾರ್ಮಿಕವಾದ ಸಂಕ್ಷಿಪ್ತ ಶೈಲಿ ಎದ್ದು ಕಾಣುತ್ತದೆ. ಬಸವಣ್ಣನವರ ಕಾಲದ ಎಲ್ಲಾ ವಚನಕಾರರಿಗೆ ಈತನ ವಚನಗಳು ಮಾದರಿಯಾಗಿದ್ದಂತೆ ತೋರುತ್ತದೆ. ಶರಣರ ವಚನಗಳ ಮಹಿಮೆಯನ್ನು ಕುರಿತು **'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡಗೀಲು ಕಾಣಾ ರಾಮನಾಥ'** ಎಂಬ ಉತ್ಕಟವಾದ ನುಡಿಗಳಿವೆ. ವೈಯಕ್ತಿಕ ಅನುಭವ ಸಾರ್ವತ್ರಿಕ ಅನುಭವವಾಗಿ ಪರಿವರ್ತಿತಗೊಂಡು ಅಂದು ರೂಢಿಯಲ್ಲಿದ್ದ ಸಾಮಾಜಿಕ ಮತ್ತು ಧಾರ್ಮಿಕ ಲೋಪದೋಷಗಳು ಈತನ ವಚನಗಳಲ್ಲಿ ಕಟುವಾದ ಟೀಕೆಗೆ, ವಿಡಂಬನೆಗೆ, ವ್ಯಂಗ್ಯಕ್ಕೆ ಈಡಾಗಿವೆಂಬುದನ್ನು ಇಲ್ಲಿ ನೋಡಬಹುದು.

**ಜ್ವರವಿಡದ ಬಾಯಿಗೆ ನೊರೆವಾಲ ಒಲಿವುದೇ ? ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ ? ಬರುಶಟಗನ ಭಕ್ತಿ ದಿಟವೆಂದು ನೆಚ್ಚಲು ಬೇಡ ಮಠದೊಳಗಣ 'ಬೆಕ್ಕ ಇಲಿಯ ಕಂಡು ಪುಟನೆಗೆದಂತಾಯಿತ್ತು. 'ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ ಕೊಯಿದುಂಬ ಕ್ರೂರ ಕರ್ಮಿಗಳನೆ ಶಿವಭಕ್ತರೆನ್ನ ಬಹುದೆ'** ಎಂಬ ವಾಕ್ಯಗಳಲ್ಲಿ ಖಂಡತುಂಡವಾದ ಜೀವನ ವಿಮರ್ಶೆಯಿದೆ. ಜೇಡರ ದಾಸಿಮಯ್ಯನು ಸಾಹಿತ್ಯ ದೃಷ್ಟಿಯಿಂದ ಬಹು ಉತ್ತಮವಾದ ವರ್ಗಕ್ಕೆ ಸೇರತಕ್ಕವಾಗಿವೆ ಎಂಬ ಡಿ. ಎಲ್. ಎನ್. ಅವರ ಉಕ್ತಿ ಪ್ರಶಂಸಾರ್ಹವಾಗಿದೆ. ಕುಲದಲ್ಲಿ – ಜಾತಿಯಲ್ಲಿ ಮೇಲುಕೀಳು ಎಂಬ ಕಲ್ಪನೆಯಾಗಲೀ ಹೆಣ್ಣು ಗಂಡೆಂಬ ಭೇದವಾಗಲಿ ಈತನಲಿಲ್ಲ. ಸರ್ವಸಮಾನತೆಯ ಸಮಾಜ ಸೃಷ್ಟಿಯ ಹೆಬ್ಬಯಕೆ ಈತನದಾಗಿದೆ. ದಾಸಿಮಯ್ಯನು ತನ್ನ ಅನುಭವಕ್ಕೆ ನಿಲುಕದ ಯಾವುದೇ ಸಂಗತಿಯನ್ನು ಹೇಳಿಲ್ಲ. ತನ್ನ ಅನುಭವವು ಸಹೃದಯಾಸಕ್ತರಿಗೆ ಜನ್ಯವಾಗಿಸಲು **ಉಪಮೆ – ರೂಪಕಗಳಿಂದ** ಹೇಳುವ ರೀತಿ ಸ್ವೋಪೋಜ್ಞವಾಗಿದೆ. ಭಾಷೆಯ ಬಳಕೆ, ವಚನಗಳ ಗಾತ್ರ ಸರಳವಾಗಿದ್ದರೂ ಪಾದದಲ್ಲಿ ಅರ್ಥ ಶ್ರೀಮಂತಿಕೆಯನ್ನು ಪಡೆದುಕೊಂಡಿದೆ. ಈತನ ವಚನಗಳು ಮುಂದಿನ ವಚನ ಸಾಹಿತ್ಯದ ಮೇಲೆ ದಟ್ಟವಾಗಿ ಪ್ರಭಾವಿಸಿವೆ. ಈತನ ಭಾವಾನುಭಾವಗಳ ಅನುಕರಣೆ ಪ್ರೇರಣೆಯ ಪ್ರಭಾವಮಂಡಲಕ್ಕೆ ಬಸವಣ್ಣನು ಒಳಗಾಗಿರುವುದಲ್ಲದೆ ಅಲ್ಲಮ, ಅಕ್ಕಮಹಾದೇವಿ, ಸರ್ವಜ್ಞರೆಲ್ಲರೂ ಆ ಪರಿಭ್ರಮಣದಲ್ಲಿರುವುದನ್ನು ಅವರ ವಚನಗಳ ಸೂಕ್ಷ್ಮ ವಿಶ್ಲೇಷಣೆಯಿಂದ ಅರಿಯಬಹುದಾಗಿದೆ.

Scanned with CamScanner

ಬಸವಣ್ಣ :

೧೨ನೇ ಶತಮಾನದ ಸಾಹಿತ್ಯದಲ್ಲಿ ಒಂದು ಸುವರ್ಣ ಅಧ್ಯಾಯ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳ ಬದಲಾವಣೆಯ ಯುಗ. ಇಂತಹ ಬದಲಾವಣೆಯ ಕೇಂದ್ರ ಬಿಂದು ಕ್ರಾಂತಿ ಪುರುಷ ಬಸವಣ್ಣ, ಭಕ್ತಿ ಭಂಡಾರಿ ಜಗಜ್ಯೋತಿಯೆಂದು ವಿಶ್ವವಿಖ್ಯಾತರಾದ ಬಸವೇಶ್ವರರು ೧೨ನೇ ಶತಮಾನ ಕಂಡ ಮಹಾನ್ ದಾರ್ಶನಿಕ ಪುರುಷ ಎಂದು ಹೇಳಬಹುದು. ಸಮಾಜ ಸುಧಾರಕರಾಗಿ, ವಿಚಾರವಾದಿಗಳಾಗಿ, ಸಾಮಾಜಿಕ ಅನಿಷ್ಟ ಹಾಗೂ ಕೆಳಸ್ತರದ ಜನತೆಯ ಶೋಷಣೆಯ ವಿರುದ್ಧ ಪ್ರತಿಭಟನೆಗೈದ ಮಹಾನ್ ಮಾನವತಾವಾದಿಯಾದ ಪುರುಷರಾಗಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ಡಾಂಭಿಕತೆಗಳನ್ನು ಎಳೆಎಳೆಯಾಗಿ ಬಿಡಿಸಿ ತಿಳಿಗನ್ನಡದ ವಚನಗಳ ಮೂಲಕ ನಿರೂಪಿಸಿದ ಮಹಾನ್ ನೇತಾರ ಇವರ ವಚನಗಳ ಅಂಕಿತನಾಮ **'ಕೂಡಲಸಂಗಮದೇವ'** ಆಗಿದೆ.

ಬಸವಣ್ಣನವರ ಜನ್ಮ ಸ್ಥಳ ಬಿಜಾಪೂರ ಜಿಲ್ಲೆಯ ಬಸವನಬಾಗೇವಾಡಿ ತಂದೆ ಮಾದಿರಾಜ ತಾಯಿ ಮಾದಾಂಬಿಕೆ ಎಂಬುವರು ಬ್ರಾಹ್ಮಣ ದಂಪತಿಗಳ ಉದರದಲ್ಲಿ ೧೧೩೧ ರಲ್ಲಿ ಜನಿಸಿದನು. ಬಾಲ್ಯದಿಂದಲೆ ಸಮಾಜದ ಅನಿಷ್ಟ, ಕಂದಾಚಾರಗಳನ್ನು ಬಗ್ಗೆ ಚಿಂತಿಸುತ್ತಿದ್ದ ಬಸವಣ್ಣನವರು ಜಾತವೇದ ಮುನಿಗಳ ಹತ್ತಿರ ಬಾಲ್ಯದ ಶಿಕ್ಷಣ ಪಡೆದರು. ಪ್ರಭುದೇವರು ಹಿರಿಯಜ್ಞಾನಿಯಾದರೆ ಬಸವಣ್ಣ ಹಿರಿಯಭಕ್ತ. ಬಿಜ್ಜಳನ ಆಸ್ಥಾನದಲ್ಲಿ **'ಭಂಡಾರಿ'** ಯಾಗಿದ್ದು ಆಧ್ಯಾತ್ಮಿಕ ದೃಷ್ಟಿಯ ಕ್ರಾಂತಿಕಾರಕ ಭಾವನೆಗಳನ್ನು ಸಮಾಜದ ಮೇಲೆ ಪ್ರತಿಬಿಂಬಿಸಿದರೂ. **'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ'** ಎಂಬ ಅಂತರಂಗ ನಿರೀಕ್ಷೆಯ ವಿಶಿಷ್ಟತೆಯನ್ನು ವಿನಯತೆಯನ್ನು ಪ್ರದರ್ಶಿಸಿದ್ದಾರೆ. ನಿರ್ಮಲ ಮನಸ್ಸಿನ ಪ್ರಾಮಾಣಿಕ ಭಕ್ತಿ ಶ್ರದ್ಧೆಗಳನ್ನು ಜೀವನದಲ್ಲಿ ಒಳಗೊಂಡಿರುವ ಸರ್ವಸಮಾನತೆಯ ಭಾವವನ್ನು ತನ್ನ ಬದುಕಿನ ಉಸಿರಾಗಿಸಿಕೊಂಡು ಸಮಾಜದಲ್ಲಿ ರೂಢ ಮೂಲವಾಗಿ ಬೇರೂರಿದ್ದ ಜಾತಿ ವೈಷಮ್ಯಗಳನ್ನು ಮತ ಧರ್ಮಗಳ ಮೇಲು – ಕೀಳುಗಳನ್ನು ಹೋಗಲಾಡಿಸಲೂ ಪ್ರಯತ್ನ ಪಟ್ಟವರಲ್ಲಿ ಬಸವಣ್ಣನವರು ಪ್ರಮುಖರಾಗಿದ್ದಾರೆ. ಬಸವಣ್ಣನವರ ವಚನಗಳಲ್ಲಿ 'ಬಹಿರಂಗ' ಶುದ್ಧಿಗಿಂತ 'ಅಂತರಂಗ' ಶುದ್ಧಿ ಮುಖ್ಯವೆಂದು ಭಾವನೆಯಿದೆ. ಮನಸ್ಸು ಶುಚಿರುಚಿಯಿಂದ ಕೂಡಿದ ಪರಿಪಕ್ವತೆಯಿರಬೇಕು ಎಂದಿದ್ದಾರೆ. **'ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ ಎನ್ನ ಮನದ ಮರ್ಕಟವ ಹೋಗಲಾಡಿಸಯ್ಯ, ಅಲಗನೆಕ್ಕುವ ಸೊಣಗನಂತೆ ಎನ್ನಮನ ಚಿತ್ತ ನಸುಗುನ್ನಿ ಕಾಯಿ,** ಎಂಬಿತ್ಯಾದಿ ವಚನಗಳು ಆತ್ಮೋದ್ಧಾರದ ನಿಲುವನ್ನು ಸಾದರಪಡಿಸುತ್ತವೆ. ಇಹಲೋಕದ ಜೀವನವನ್ನು ಸಾಧನೆಯ ಮಾರ್ಗಕ್ಕೆ ಅಳವಡಿಸಿ ಕೊಳ್ಳುವ ತತ್ವ ಪ್ರತಿಪಾದಕರೂ ಕೂಡ ಆಗಿದ್ದಾರೆ. ಬಸವಣ್ಣನವರ ಆತ್ಮಭಕ್ತಿಯು ಪರಿಣಿತ ಭಕ್ತಿಯಾಗಿ ಸಮರ್ಪಣ ಭಾವದಿಂದ ನಿರ್ಭೀತ ನಿಶ್ಚಿಂತೆಗಳಿಂದ ತನ್ನ ಆರಾಧ್ಯ ಮೂರ್ತಿಗೆ ನೆರವೇರಿಸಿದವರು. "ವಚನದಲ್ಲಿ ನಾಮಾಮೃತ ತುಂಬಿ ನಯನದಲ್ಲಿ ನಿಮ್ಮ ಮೂರುತಿ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ" ಎಂಬ ಭಾವನೆಯೂ "ಎನ್ನ ಕಾಯವ ದಂಡಿಗೆಯ ಮಾಡಯ್ಯ ಎನ್ನ ಶಿರವ ಸೊರೆಯ ಮಾಡಯ್ಯ ಎನ್ನ ನರವ ತಂತಿಯ ಮಾಡಯ್ಯ ಎಂಬ ಭಾವ ಪೂರ್ವಕ ವಚನಗಳು ಭಕ್ತಿ ರಸದ ಉತ್ತುಂಗತೆಗೆ ನಿದರ್ಶನವಾಗಿವೆ.

ಸಾಮಾಜಿಕ ಜೀವನದ ಕಟು ಟೀಕೆ, ವಿಡಂಬನೆಯನ್ನು ಬಸವಣ್ಣನವರ ವಚನಗಳಲ್ಲಿ ಕಾಣಬಹುದು. ವೈದಿಕರು, ಅವೈದಿಕರು, ಭವಿಗಳು – ಭಕ್ತರೂ, ಹಿರಿಯರು – ಕಿರಿಯರು ಯಾರೇ ಆಗಲಿ ಅವರಲ್ಲಿಯ ಹುಸಿ – ಮೋಸ, ವಂಚನೆ – ಕಪಟಗಳನ್ನು ಬಯಲಿಗೆಳೆದು ಶಸ್ತ್ರ ಚಿಕಿತ್ಸೆಗೈಯುತ್ತಿದ್ದರು. ಅಂದಿನ ಸಮಾಜದ ಅವ್ಯವಸ್ಥೆ ಭೇದ ಭಾವಗಳ ಬಗೆಗೆ ಅಸಹನೆ ; ಅವುಗಳನ್ನು ನಿಷ್ಠುರತೆಯಿಂದ ಖಂಡಿಸಿದ್ದಾರೆ. **"ಲೋಕದ ಡೊಂಕ ನೀವೇಕೆ ತಿದ್ದುವಿರಿ ? 'ನಿಮ್ಮ ನಿಮ್ಮ ತನುವ ಸಂತೈಸಿ ಕೊಳ್ಳಿ ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" 'ಮರ್ತ್ಯಲೋಕವೆಂಬುದು, ಕರ್ತಾರನ ಕಮ್ಮಟವಯ್ಯ' ಆಚಾರವೇ ಸ್ವರ್ಗ, ಅನಾಚಾರವೇ ನರಕ, 'ದಯವಿಲ್ಲದ ಧರ್ಮವಾವುದಯ್ಯ ! ದಯವೇ ಬೇಕು ಸಕಲ ಪ್ರಾಣಿಗಳಲ್ಲಿ ದಯವೇ ಧರ್ಮದ ಮೂಲವಯ್ಯ"** ಹೀಗೆ ಉಪದೇಶ ಪರ ವಚನಗಳಲ್ಲಿ ಸರ್ವ ಸಮಾನತೆ, ಭೂತದಯೆ, ನೀತಿನಿಷ್ಠೆ ಶಿವಭಕ್ತಿಯ ಕಳಕಳಿಯಿಂದ ತಿಳಿಸುವ ನವೀನ ಸ್ಮೃತಿಯಿದೆ.

ಸಮಾಜದಲ್ಲಿ ಜನರ ಡಾಂಭಿಕತನ ಪೊಳ್ಳುತನವನ್ನು **"ಕಲ್ಲನಾಗರ ಕಂಡರೆ ಹಾಲೆನೆರೆಯೆಂಬರು ದಿಟದ ನಾಗರ ಕಂಡರೆ ಕೊಲ್ಲೆಂಬರು ; ಹಾವು ತಿಂದವರ ನುಡಿಸಬಹುದು ;** ಎಂಬಲ್ಲಿ ಆಷಾಢಭೂತಿತನ ಹಾಗೂ ಗರ್ವಿಷ್ಟ ಪ್ರಜ್ಞೆಯ 'ಹೀನ ಸ್ಥಿತಿಯ ವಿಡಂಬನೆ ಸ್ಪಷ್ಟವಾಗಿದೆ. **ಬಸವಣ್ಣನ ವಚನಗಳೆಂದರೆ ಸದಾಚಾರಸ್ಮೃತಿಗಳು. ಅವು ಎಷ್ಟು ಸರಳ, ಎಷ್ಟು ಸುಲಭ ಎಷ್ಟು ಲಲಿತ ! ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ ! ಇದೇ ಬಹಿರಂಗ ಶುದ್ಧಿ ! ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ'** ಸದಾಚಾರವೇ ಮುಕ್ತಿಗೆ ಸೋಪಾನವೆಂದು ಬಸವಣ್ಣನ ಬೋಧನೆ ಮಾನವಜನ್ಮ ಸಾರ್ಥಕವಾಗಬೇಕಾದರೆ ಸುತ್ತು ಮುತ್ತಿನ ಹತ್ತು ಜನಕ್ಕೆ ಉಪಕಾರಿಯಾಗಿ ಬಾಳಬೇಕು. 'ಮರ್ತ್ಯವೆಂಬುದು ಕರ್ತಾರನ ಕಮ್ಮಟ' ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆ ಆದ್ದರಿಂದ ಇಹಪರಗಳೆರಡನ್ನು ಸಾಧಿಸುವ ಸುಲಭೋಪಾಯ ಎಂದರೆ ಎಲ್ಲರಲ್ಲಿಯೂ ದಯಾಶಾಲಿಯಾಗಿರುವುದು ಅದೇ ಅತ್ಯಂತ ಶ್ರೇಷ್ಠವಾದ ಮಾನವಧರ್ಮ **'ದಯವಿಲ್ಲದ ಧರ್ಮವೇವುದಯ್ಯ ! ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮದ ಮೂಲವಯ್ಯ'** ಎನ್ನುತ್ತಾರೆ ಬಸವಣ್ಣ. ಆತನ ಈ ಮಾತುಗಳನ್ನು ಕೇಳಿ **'ಸತ್ಯವ ನುಡಿವುದೇ ದೇವಲೋಕ' ಮಿಥ್ಯವ ನುಡಿವುದೇ ಮರ್ತ್ಯಲೋಕ ಆಚಾರವೇ ಸ್ವರ್ಗ ; ಅನಾಚಾರವೇ ನರಕ ; ಅಯ್ಯಾ ಎಂದಡೆ ಸ್ವರ್ಗ, ಎಲ್ಲವೋ ಎಂದಡೆ ನರಕ, ದೇವಾ, ಭಕ್ತ, ಜಯಾ**

Scanned with CamScanner

ಜೀಯ ಎಂಬ ನುಡಿಯೊಳಗೆ ಕೈಲಾಸವಿದೆ. ಎಂಬ ವಚನಗಳನ್ನು ಕೇಳಿದಾಗ ಉಪನಿಷದ್ವಾಕ್ಯಗಳನ್ನು ಕೇಳಿದ ಅನುಭವವಾಗುತ್ತದೆ. ವಚನಗಳನ್ನು 'ಕನ್ನಡದ ಉಪನಿಷತ್ತು' ಗಳೆಂದು ಕರೆದುದರ ಸಾರ್ಥಕತೆ ಅರ್ಥವಾಗುತ್ತದೆ. ಸಂಸಾರದ ಅರಿವನ್ನು ಮೂಡಿಸಲು 'ಸಂಸಾರವೆಂಬುದು ಗಾಳಿಯ ಸೊಡರು, ಸಿರಿಯೆಂಬುದು ಸಂತೆಯಮಂದಿ ಎಂದು ಆತ ಬೋಧಿಸುತ್ತಾನೆ.

ಆತನ ವಚನಗಳು ಜ್ಞಾನ ಜ್ಯೋತಿಯ ಶುಭ್ರಕಾಂತಿಯಾದ ತೊಳಗಿ ಬೆಳಗುತ್ತಿವೆ. ಆತನು ಹೇಳುವ 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು' ಎಂಬ ಆದರ್ಶಕ್ಕೆ ಆತನ ನುಡಿಗಳೇ ಉದಾಹರಣೆಯಾಗಿವೆ. ಆತನ ವಚನಗಳಲ್ಲಿ ಧರ್ಮ, ಕಾವ್ಯಧರ್ಮಗಳು ಸಮರಸವಾಗಿ ಬೆರೆತು ಹೃದಯಕ್ಕೆ ಆನಂದವನ್ನು ಆತ್ಮಕ್ಕೆ ಶ್ರೇಯಸ್ಸನ್ನು ಒದಗಿಸುತ್ತವೆ. ಬಸವಣ್ಣ ಮಹಾಪುರುಷನಾಗಿ, ದೇವಮಾನವನಾಗಿ ನಮ್ಮ ಮುಂದೆ ಇಂದಿಗೂ ನಿಂತಿದ್ದಾನೆ.

ಹೀಗೆ ಬಸವಣ್ಣ ಬಹುಮುಖ ವ್ಯಕ್ತಿತ್ವದ ಅಪೂರ್ವ ವ್ಯಕ್ತಿ. ಭಕ್ತಿ ಭಂಡಾರಿ, ಸಾಮಾಜಿಕ ಕ್ರಾಂತಿಕಾರಿ, ಆಂದೋಳನಕಾರ, ದೈವಭಕ್ತನಿಗಿಂತ ಮಿಗಿಲಾಗಿ ವಿಶ್ವಮಾನವತಾವಾದಿಯೂ ಸಾಹಿತ್ಯಾಂಶ ಗುಣಗಳ ಸಾಕಾರಮೂರ್ತಿಯಾಗಿ, ಭಾರತದ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ. ಅಪೂರ್ವವಾಗಿ ದಾಖಲಿಸಿದೆ. 'ಕಾಯಕವೇ ಕೈಲಾಸ; ಎಂಬ ಅಮರ ಸಂದೇಶ ಸಾರ್ವಕಾಲಿಕವಾಗಿ ಪುರೋಗಾಮಿ ಆಧಾರಸ್ತಂಭದಂತಿದೆಯೆಂಬುದನ್ನು ಮರೆಯುವಂತಿಲ್ಲ ಎಂದು ಹೇಳಬಹುದು.

ಅಕ್ಕಮಹಾದೇವಿ :

'ಅಕ್ಕ' ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿ ಮತ್ತು ವಚನಕಾರ್ತಿ 'ಚನ್ನಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನಗಳ ರಚನೆಗೈದಿದ್ದಾರೆ. ಉಡತಡಿಯ ನಿರ್ಮಲಶೆಟ್ಟಿ ಮತ್ತು ಸುಮತಿಯರೆಂಬ ವೀರಶೈವ ದಂಪತಿಗಳ ಮಗಳಾಗಿ ಜನಿಸಿದಳು. ಹದಿನಾರರ ಹರೆಯದಲ್ಲಿ ಒಲ್ಲದ ಮನಸ್ಸಿನಿಂದ ಆ ಊರ ರಾಜ ಕೌಶಿಕನೊಡನೆ ವೈವಾಹಿಕ ಬಂಧನಕ್ಕೊಳಗಾಗಿ ನಾನಾ ರೀತಿಯ ವಿಕಟ ಮಾನಸಿಕ ಯಾತನೆಯ ವಿಘಟನೆಯನ್ನು ಹೊಂದಿ ಭೋಗ ಭಾಗ್ಯವನ್ನೆಲ್ಲ ತ್ಯಜಿಸಿ, ವಿರಕ್ತ ದಿಗಂಬರೆಯಾಗಿ, ನಿರಾಕಾರ ಮೂರ್ತಿ ಅಲೌಕಿಕ ಗಂಡನನ್ನು ಹರಿಸುತ್ತಾ ಹೊರಟ ದಿಟ್ಟ ಧೀಮಂತ ವೀರ ಮಹಿಳೆಯಾಗಿದ್ದಾಳೆ. ಸಾಂಪ್ರದಾಯಕ ಸಮಾಜದ ವಿವಾಹ ನಿಯಮವನ್ನು ಧಿಕ್ಕರಿಸಿ, ಪುರಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಬಗೆಗಿದ್ದ ನಿಕೃಷ್ಟ ಸ್ಥಾನಮಾನ, ಕಿರುಕುಳ, ಹಿಂಸೆಗಳ ವಿರುದ್ಧ ಸೆಡ್ಡೊಡೆದು ಪ್ರತಿಭಟನೆ ಗೈದ ಮಹಾಮಹಿಮ ವೀರಾಗ್ರಣಿ. ಅಕ್ಕಮಹಾದೇವಿ ಆಕೆಯ ವಚನಗಳ ಅಂಕಿತ 'ಚನ್ನಮಲ್ಲಿಕಾರ್ಜುನ' ವಾಗಿದೆ. ಅವಳ ವಚನಗಳಲ್ಲಿ ಸಮಾಜದ ವಿಮರ್ಶೆಗಿಂತ ಸ್ವವಿಮರ್ಶೆಯೇ ಹೆಚ್ಚಾಗಿದೆ. ತನ್ನ ಮಾನಸಿಕ ತುಮುಲಗಳನ್ನು **'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ ಏರಿಲ್ಲದ ಗಾಯದಲ್ಲಿ ನೊಂದೆನವ್ವ'** ಎಂಬಲ್ಲಿಯೂ ಸಂಸಾರದ ಹೇಯ ವಿಕಳಾವಸ್ಥೆಯ ತನ್ನ ದೀನ ಸ್ಥಿತಿಯಾದದ್ದನ್ನು ಕುರಿತು **"ತರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ ಬೇವುತ್ತಿದ್ದೆನಯ್ಯ"** ತನ್ನ ಲೋಕಪತಿ ಚನ್ನಮಲ್ಲಿಕಾರ್ಜುನನನ್ನು ಹುಡುಕುವಲ್ಲಿ ಅನುಭವಿಸಿದ ವಿಕಟಯಾತನೆ ನೋವು, ವಿರಹವೇದನೆಗಳ ಆಗರ ಹೃದಯ ವಿದ್ರಾವಕರವಾದುದು. **'ಅಳಿಸಂಕುಳವೇ ಮಾಮರವೇ ಬೆಳದಿಂಗಳೇ ಕೋಗಿಲೆಯೇ ನಿಮ್ಮ ನಿಮ್ಮನೆಲ್ಲರನ್ನು ಒಂದು ಬೇಡವೆನು ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ ; 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ' 'ಸಾವಿಲ್ಲದ ಕೇಡಿಲ್ಲದ ಚೆಲುವಾಂಗ ನೋಲಿದೆ ಅವ್ವ ಈ ಸಾವ ಕೆಡುವ ಗಂಡರನೊಯ್ದು 'ಒಲೆಯೊಳಗಿಕ್ಕು'** ಎಂಬಿತ್ಯಾದಿ ವಚನಗಳಲ್ಲಿ ಆಧ್ಯಾತ್ಮ – ಶೃಂಗಾರ, ಅಸದೃಶ, ಸ್ಥಾಯಿ ಭಾವವು ಅಭಿವ್ಯಕ್ತವಾಗುತ್ತದೆ. **"ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ – – – ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೂ ಸಮಾಧಾನಿಯಾಗಿರಬೇಕು'**. ಎಂಬಲ್ಲಿ ಮಾನವನು ಸಮಾಜದಲ್ಲಿ ಎಂತಹ ಕಾಠಿಣ್ಯ ಪರಿಸ್ಥಿತಿ ಒದಗಿದರೂ ಆ ಗಂಡಾಂತರಗಳನ್ನು ನಿಭಾಯಿಸುವ ಧೈರ್ಯ – ಸ್ಥೈರ್ಯ ಮನುಷ್ಯರಲ್ಲಿ ಬರಬೇಕೆಂಬ ಧೀರೋದಾತ್ತ ಹೇಳಿಕೆಯಾಗಿದೆ. ಇಂತಹ ಸ್ಥಿತ ಪ್ರಜ್ಞಳ ಮಟ್ಟಕ್ಕೆ ಏರಿದ್ದುದಿರಿಂದಲೆ ಆಕೆಯ ವಚನಗಳು ಮಹೋನ್ನತವಾದ ಗೌರವಕ್ಕೆ ಪಾತ್ರವಾಗಿವೆ. ಚೆನ್ನಬಸವಣ್ಣ **'ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾ ಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ, ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದುವಚನಕ್ಕೆ ಕೂಡಲ ಚೆನ್ನಸಂಗಯ್ಯನಲ್ಲಿ ಮಹಾದೇವಿಯಕ್ಕನ ಒಂದು ವಚನ ಕಾಣಾ ಸಿದ್ಧರಾಮಯ್ಯ ! ಅಕ್ಕನನ್ನು ಗೌರವಿಸಿರುವುದು ಸಾರ್ಥಕವಾಗಿದೆ.**

ಅಕ್ಕಮಹಾದೇವಿಯು ವಚನಗಳು ಜೊತೆಗೆ ತಾತ್ವಿಕ ವಿಷಯದ ೬೭ ತ್ರಿಪದಿಗಳನ್ನೊಳಗೊಂಡ **ಯೋಗಾಂಗ ತ್ರಿವಿಧಿ** ಎಂಬ ಚಿಕ್ಕಕೃತಿ ರಚಿಸಿದ್ದಾಳೆ. ಇದರಲ್ಲಿ ವೈಯಕ್ತಿಕ ಅಂಶಗಳನ್ನು ಬೆಡಗಿನ ಮಾದರಿಯ ಅಂಶಗಳಲ್ಲಿ ನಿರೂಪಿಸಲಾಗಿದೆ. ತೀ.ನಂ.ಶ್ರೀ ಯವರ ಅಭಿಪ್ರಾಯದಂತೆ 'ಅಕ್ಕನ ವಚನಗಳ ಬಹುಭಾಗ ನಿಜವಾಗಿಯೂ ರಸಾರ್ದ್ರವಾದದ್ದು ಉಪಮಾನಗಳಿಂದ. ಚಿತ್ರಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು. ಅವಳದ್ದು ಕವಿಯ ಹೃದಯ ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು' ಎಂಬ ಮಾತು ಪ್ರಶಂಸನೀಯವಾದದ್ದು. ವಚನ ಸಾಹಿತ್ಯ ಕೋಶದ ಉಜ್ವಲ ಮಿನುಗು ತಾರೆಯಾಗಿ, ಆದರ್ಶ ಮಹಿಳೆಯಾಗಿ ಕಂಡು ಬಂದ ಅಕ್ಕಮಹಾದೇವಿ, ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನು ಧಿಕ್ಕರಿಸಿ, ಜೀವನ ಪೂರ್ತಿ ಹೋರಾಡಿ ವಚನ ಸಾಹಿತ್ಯಕ್ಕೆ ಮತ್ತು ಕನ್ನಡ ಸಾಹಿತ್ಯಕ್ಕೆ ನೀಡಿರುವ ತನ್ನದೆ ಆದ ಕೊಡುಗೆ ಕನ್ನಡದ ಸ್ತ್ರೀ ಸಂವೇದನಾ ಅಭಿವ್ಯಕ್ತಿಯ ಮೊದಲ ದಾಖಲೆಯಾಗಿರುವುದನ್ನು ತಿಳಿದುಬರುತ್ತದೆ.

Scanned with CamScanner